ಅ.ದಾ. ನಂ. ಃ 203/2015
ಪಿ. ಡಬ್ಲ್ಯೂ. 1

ದಿನಾಂಕ ಃ 30.06.2022.
ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಃ 1 ರಿಂದ 4 ನೇ ಪ್ರತಿವಾದಿ ಪರ ಶ್ರೀ ಎಲ್ ಎಸ್ ಹೆಚ್ ವಕೀಲರಿಂದಃ**

1. ಈ ದಾವೆ ಮತ್ತು ಪ್ರಮಾಣಪತ್ರ ಸಲ್ಲಿಸಲು ನಾನೆ ಮಾಹಿತಿ ನೀಡಿದ್ದೇನೆ. ಪ್ರತಿವಾದಿಯರ ಪರಿಚಯ ಇದೆ. ಪ್ರತಿವಾದಿಯರ ತಂದೆ ಅಜೀಜ್ ಖಾನ್ ಪರಿಚಯ. ಅಜೀಜ್ ಖಾನ್ ಮೂಲತಹ ಉಡಗಣಿಯವರು, ನಂತರ ಅವರು ಶಿವಮೊಗ್ಗಕ್ಕೆ ಹೋಗಿ ನೆಲೆಸಿದ್ದರು. ನಾನು ಹುಟುವುದಕ್ಕಿಂತ ಮೊದಲೇ ಅವರು ಶಿವಮೊಗ್ಗಕ್ಕೆ ಹೋಗಿದ್ದರು. ಅಜೀಜ್ ಖಾನ್ ರವರಿಗೆ ಉಡುಗಣಿಯಲ್ಲಿ ಸಹೋದರರಿದ್ದಾರೆ ಎಂದರೆ ಸರಿ. ಅಜೀಜ್ ಖಾನ್ ಮತ್ತು ಅವರ ಸಹೋದರರಿಗೆ 25 ಎಕರೆಯಷ್ಟು ಉಡುಗಣಿಯಲ್ಲಿ ಆಸ್ತಿ ಇದೆ ಎಂದರೆ ಸರಿ.

2. ಅಜೀಜ್ ಖಾನ್ ರವರಿಗೆ 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. ಅಜೀಜ್ ಖಾನ್ ರವರ ಹಿರಿಯ ಮಗ ಷಫೀವುಲ್ಲಾ ಮರಣ ಹೊಂದಿದ್ದಾರೆ. ಷಫೀವುಲ್ಲಾ ರವರ ಹೆಂಡತಿ ಇದ್ದಾರೆ. ಅವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಅಜೀಜ್ ಖಾನ್ ರವರ 3 ಜನ ಹೆಣ್ಣು ಮಕ್ಕಳಲ್ಲಿ ಒಬ್ಬರ ಹೆಸರು ಗೊತ್ತು. ಉಳಿದ ಇಬ್ಬರನ್ನು ನೋಡಿದ್ದೇನೆ ಆದರೆ ಅವರ ಹೆಸರು ಗೊತ್ತಿಲ್ಲ.

3. ಅಜೀಜ್ ಖಾನ್ ರವರ ಸಹೋದರರು ಮತ್ತು ಅಜೀಜ್ ಖಾನ್ ಮಕ್ಕಳ ಮಧ್ಯೆ ಸುಮಾರು 20 ವರ್ಷಗಳಿಂದ ದಾವಾ ಜಮೀನು ಸೇರಿದಂತೆ ವ್ಯಾಜ್ಯ ನಡೆಯುತ್ತಿದೆ ಎಂದರೆ ಸಾಕ್ಷಿಯು ವಾಜ್ಯ ನಡೆಯುತ್ತಿದೆ ಆದರೆ ಅದರಲ್ಲಿ ದಾವಾ ಜಮೀನು ಇಲ್ಲ ಎನ್ನುತ್ತಾರೆ. ನಮಗೆ ದಾವಾ ಜಮೀನನ್ನು ಕೊಟ್ಟಾಗ ವ್ಯಾಜ್ಯ ನಡೆಯುತ್ತಿರಲಿಲ್ಲ. ದಾವಾ ಆಸ್ತಿಯನ್ನು ಖರೀದಿಸುವ ಮೊದಲು ದಾವಾ ಆಸ್ತಿಗೆ ಸಂಬಂಧಿಸಿದಂತೆ ಪಹಣಿಯನ್ನು ಮಾತ್ರ ನೋಡಿದ್ದೇನೆ. ಸಾಕ್ಷಿ ಮುಂದುವರೆದು ಮ್ಯುಟೇಶನ್ ನೋಡಿದ್ದೇನೆ ಎನ್ನುತ್ತಾರೆ. ಅದರಲ್ಲಿ ಪೌತಿಯ ಮೇರೆಗೆ 1 ರಿಂದ 4 ನೇ ಪ್ರತಿವಾದಿಯರ ಹೆಸರು ನಮೂದಿಸಿರುವುದು ಕಂಡು ಬಂದಿತು. ಅಜೀಜ್ ಖಾನ್ ರವರಿಗೆ ಎಷ್ಟು ಜನವಾರಸುದಾರರೆಂದು ನಾನು ನೋಡಿಲ್ಲ. ನಾವು ವಾರಸುದಾರರ ಬಗ್ಗೆ ವಿಚಾರಿಸಿದಾಗ 3 ಮತ್ತು 4 ನೇ ಪ್ರತಿವಾದಿಯರನ್ನು ಕೇಳಿದಾಗ ಅಜೀಜ್ ಖಾನ್ ರವರಿಗೆ 3 ಜನ ಗಂಡು ಮಕ್ಕಳು , 3 ಜನ ಹೆಣ್ಣು ಮಕ್ಕಳಿದ್ದಾರೆ ಆದರೆ ಖಾತೆ ಪಹಣಿ ನಮ್ಮ ಹೆಸರಿಲ್ಲಿದೆ ಎಂದು ತಿಳಿಸಿದರು.

4. 1 ಮತ್ತು 2 ನೇ ಪ್ರತಿವಾದಿಯರು ಶಿವಮೊಗ್ಗದಲ್ಲಿ ಹಣ್ಣು ಮಾರಿಕೊಂಡು ಇದ್ದಾರೆ. 4 ನೇ ಪ್ರತಿವಾದಿ

ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. 3 ನೇ ಪ್ರತಿವಾದಿ ಹೊಟೇಲ್ ನಲ್ಲಿ ಕೆಲಸಕ್ಕೆ ಹೋಗುತ್ತಾರೆ. ಉಳಿದ ಇಬ್ಬರು ಹೆಣ್ಣು ಮಕ್ಕಳು ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. ಅಜೀಜ್ ಖಾನ್ ರವರ ಮಕ್ಕಳು ಬೇರೆ ಬೇರೆ ಕಡೆ ಇದ್ದುದರಿಂದ ತಮ್ಮ ವ್ಯಾಜ್ಯ ನಡೆಸಲು ಫ್ರಾಸಾ 3 ಮತ್ತು ನಾಗರಾಜ್ ರವರಿಗೆ ದಾಖಲೆಗಳನ್ನು ತೆಗೆಸಲು ಹೇಳಿದ್ದರು ಎಂದರೆ ಗೊತ್ತಿಲ್ಲ. ಪ್ರತಿವಾದಿಯರ ಪರವಾಗಿ ಎಲ್ಲ ನ್ಯಾಯಾಲಯಗಳಲ್ಲಿ ಅವರೇ ಕೇಸು ನಡೆಸುತ್ತಿದ್ದರು ಎಂದರೆ ಗೊತ್ತಿಲ್ಲ. 2005 ನೇ ಇಸವಿಯಿಂದ ಅಜೀಜ್ ಖಾನ್ ಸಹೋದರರಿಗೂ ಮತ್ತು ಅಜೀಜ್ ಖಾನ್ ರವರ ವಾರಸುದಾರರಿಗೂ ಖಾತೆ ಬದಲಾವಣೆ ಕುರಿತು ವ್ಯಾಜ್ಯ ಇತ್ತು ಎಂದರೆ ಗೊತ್ತಿಲ್ಲ. ಈ ನ್ಯಾಯಾಲಯದಲ್ಲಿ ಅ.ದಾವಾ.ನಂ.107/2008 ದಾವೆ ಇತ್ತು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಸೇರಿ ಖಾತೆ ಬದಲಾವಣೆ ಕುರಿತು ವ್ಯಾಜ್ಯ ನಡೆಯುತ್ತಿತ್ತು ಎಂದರೆ ಸರಿಯಲ್ಲ.

5. ನಿಪಿ 2 ರ 1 ನೇ ಕಾಲಂ ನಲ್ಲಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ನಮೂದಿಸಲಾಗಿದೆ ಎಂದರೆ ಸರಿ. ನಿಪಿ 2 ರಲ್ಲಿ 2006 ರಲ್ಲಿ ಉಪವಿಭಾಗಾಧಿಕಾರಿಗಳು ಖಾತೆ ಬದಲಾವಣೆಗೆ ತಡೆಯಾಜ್ಞೆ ನೀಡಿದ್ದಾರೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿಪಿ 2 ರಲ್ಲಿ 12 ಜನ ವಾರಸುದಾರರನ್ನು ನಮೂದಿಸಲಾಗಿದೆ ಎಂದರೆ ಸರಿ. ನಾವು ಖರೀದಿ ಮಾಡುವಾಗ 12 ಜನರನ್ನು ಕೇಳಿಲ್ಲ ಯಾಕೆಂದರೆ ಆ ಸಮಯದಲ್ಲಿ 12 ಜನರ ಹೆಸರು ಇರಲಿಲ್ಲ ಎನ್ನುತ್ತಾರೆ. ನಾವು ದಿಃ 18.8.2009 ರಂದು ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇವೆ. ಫ್ರಾಸಾ 3 ರವರ ಮನೆಯಲ್ಲಿ ಖರೀದಿಯಾಗಿದೆ. ಬೆಳಿಗ್ಗೆ ಸುಮಾರು 11 ಗಂಟೆಗೆ ಆಗಿದೆ. ಆ ಸಮಯದಲ್ಲಿ ನಾಗರಾಜ , ಫ್ರಾಸಾ 3 ಅಮೀರ್ ಜಾನ್ , ಯೂಸೂಫ್ ಅಲಿ , ಅಯಾಜ್ ಅಹಮ್ಮದ್ , 1 ರಿಂದ 4 ಪ್ರತಿವಾದಿಯರು ಮತ್ತು ನಾವು ಇದ್ದೆವು.

6. ಪತ್ರವನ್ನು ಅದೇ ದಿನ ಮಹೇಂದ್ರ ಕುಮಾರ್ ರವರ ಕಛೇರಿಯಲ್ಲಿ ಮಧ್ಯಾಹ್ನ 2 ಗಂಟೆಗೆ ಬರೆಯಿಸಿದೆವು. ಪತ್ರವನ್ನು ಗಣಕಯಂತ್ರದಲ್ಲಿ ಬರೆಸಿದೆವು. ನಾವು ಹೇಳಿದಂತೆ ಮಹೇಂದ್ರ ಕುಮಾರ್ ರವರು ಬರೆದರು. 1 ಮತ್ತು 2 ನೇ ಪ್ರತಿವಾದಿ ಮತ್ತು ನಾವು ಹೋಗಿ ಛಾಪಾ ಕಾಗದವನ್ನು ತೆಗೆದುಕೊಂಡು ಬಂದೆವು. ನಾಗರಾಜ್ ರವರು ಬ್ಯಾಂಕಿನಲ್ಲಿ ಚಲನ್ ಬರೆದರು. ನನ್ನ ಹತ್ತಿರ ಹಣ ಪಡೆದು ನಾಗರಾಜ್ ರವರು ಛಾಪಾ ಕಾಗದಕ್ಕೆ ಹಣ ನೀಡಿದರು. ಛಾಪಾ ಕಾಗದ ತೆಗೆದುಕೊಂಡು ಬಂದು ಮಹೇಂದ್ರ ಕುಮಾರ್ ರವರ ಕಛೇರಿಯಲ್ಲಿ ಪ್ರಿಂಟ್ ತೆಗೆಸಿದೆವು. ಪತ್ರಕ್ಕೆ ಮೊದಲು 1 ನೇ ಪ್ರತಿವಾದಿ ಸಹಿ ಹಾಕಿದರು. 1 ನೇ ಪ್ರತಿವಾದಿ 2 ಸಹಿ ಹಾಕಿದರು. ಆ ನಂತರ 2 ನೇ ಪ್ರತಿವಾದಿ ಸಹಿ ಮಾಡಿದರು. ಆ ನಂತರ 4 ನೇ ಪ್ರತಿವಾದಿ ನಂತರ 3 ನೇ ಪ್ರತಿವಾದಿ ನಂತರ ಸಾಕ್ಷಿದಾರರು ಸಹಿ

ಮಾಡಿದರು. ಅವರು 2 ಪೇಪರ್ ಗೆ 2 ಸಹಿ ಮಾಡಿದರು. ಪತ್ರಬರಹಗಾರರು ಓದಿ ಹೇಳಿದ ನಂತರ ಅವರು ಸಹಿ ಮಾಡಿದರು. ಸಾಕ್ಷಿದಾರರಾಗಿ ಮೊದಲು ನಾಗರಾಜ, ನಂತರ ಕ್ರಮವಾಗಿ ಯಾರು ಸಹಿ ಮಾಡಿದ್ದಾರೆ ಎಂದು ನೆನಪಿಲ್ಲ. ಸಾಕ್ಷಿದಾರರು ಎರಡು ಪುಟಗಳಿಗೆ 2 ಸಹಿ ಹಾಕಿದ್ದಾರೆ.

7. ದಾವಾ ಆಸ್ತಿಯನ್ನು ಮಾರಾಟ ಮಾಡಲು ನಾಗರಾಜ್ ಮತ್ತು ಪ್ರಾಸಾ 3 ರವರು ನಮಗೆ ದೂರವಾಣಿ ಕರೆ ಮಾಡಿದಾಗ ನಾವು ಶಿಕಾರಿಪುರಕ್ಕೆ ಬಂದೆವು. ಆ ದಿನ ಬೆಳಿಗ್ಗೆ 9.00 ಗಂಟೆಗೆ ಕರೆ ಮಾಡಿದ್ದರು. ನನ್ನ ಜೊತೆ ಯೂಸುಫ್ ಆಲಿ ಮತ್ತು ಫಯಾಜ್ ರವರನು ಕರೆದುಕೊಂಡು ಬಂದಿದ್ದೆನು. 1 ರಿಂದ 4 ನೇ ಪ್ರತಿವಾದಿಯರು  ನಮಗೆ ಜಮೀನು ಕೋರ್(ಸಾಗುವಳಿ) ಮಾಡಲು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸ.ನಂ. 46 ರಿಂದ 48 ನ್ನು ನಾಗರಾಜ್ ಮತ್ತು ಪ್ರಾಸಾ 3 ರವರ ಜವಾಬ್ದಾರಿಯ ಮೇರೆಗೆ ಬೇರೆಯವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರು ನಮಗೆ ಗುತ್ತಿಗೆಯ ಮೇಲೆ ಸಾಗುವಳಿ ಮಾಡಲು ಕೊಟ್ಟಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ನಾನು ಈಗ ಸಾಗುವಳಿ ಮಾಡುತ್ತಿಲ್ಲ. ಈಗ ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ(ಸ.ನಂ.51) ಸಾಗುವಳಿ ಮಾಡಿದರೆ ನಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಈಗ ಅವರೇ ಸಾಗುವಳಿ ಮಾಡುತ್ತಿದ್ದಾರೆ ಎನ್ನುತ್ತಾರೆ.

8. ಮುಂಗಡ 2 ಲಕ್ಷ ಹಣವನ್ನು ನಾನು ಯೂಸುಫ್ ಅಲಿ ಕೈಯಲ್ಲಿ ಮಹೇಂದ್ರ ಕುಮಾರ್ ರವರ ಕಛೇರಿಯಲ್ಲಿ ಕೊಟ್ಟಿದ್ದೆನು. ನಂತರ ಅದನ್ನು ಅವರು 4 ನೇ ಪ್ರತಿವಾದಿಯವರಿಗೆ ನೀಡಿದರು. ನಾನು 2 ಲಕ್ಷ ಹಣವನ್ನು ಶಿರಾಳಕೊಪ್ಪ ಕೆನರಾ ಬ್ಯಾಂಕ್ ನಿಂದ ತಂದಿದ್ದೆ. ಸದರಿ ಹಣವನ್ನು ನಾನು ಅದೇ ದಿನ ಬಿಡಿಸಿಕೊಂಡು ಬಂದಿದ್ದೆನು. ಅವರು ನಮಗೆ ಮಾರಾಟ ಮಾಡುವುದು ನಮಗೆ ಮೊದಲೇ ತಿಳಿದಿತ್ತು. ನನ್ನ ಸಹೋದರ ನಯೀಮ್ ನನ್ನು ಹಣ ತೆಗೆದುಕೊಂಡು ಬರಲು ಕೆನರಾ ಬ್ಯಾಂಕಿಗೆ ಕಳುಹಿಸಿದ್ದೆನು. ಸದರಿ ಹಣವನ್ನು ನನ್ನ ಅಕೌಂಟ್ ನಿಂದ ಬಿಡಿಸಿಕೊಂಡು ಬರಲು ಚೆಕ್ ನೀಡಿದ್ದೆನು. ಸದರಿ ಚೆಕ್ ನಂಬರ್ ಹೇಳಲು ಆಗುವುದಿಲ್ಲ. ನಯೀಮ್ ಸುಮಾರು 1 ಗಂಟೆಗೆ ಹಣವನ್ನು ತೆಗೆದುಕೊಂಡು ಬಂದನು. 1000 ಮುಖಬೆಲೆಯ 2 ಬಂಡಲ್ ಗಳನ್ನು ತೆಗೆದುಕೊಂಡು ಬಂದನು. ಹಣಬಿಡಿಸಿಕೊಂಡು ಬಂದ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಸದರಿ ಮೊತ್ತವನ್ನು ಬಿಡಿಸಿಕೊಂಡು ಬಂದ ಬಗ್ಗೆ ನನ್ನ ಅಕೌಂಟ್ ನ ಸ್ಟೇಟ್ ಮೆಂಟ್ ಅಥವಾ ಪಾಸ್ ಬುಕ್ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಈಗ ಸಿಗುತ್ತದೋ ಇಲ್ಲವೋ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿಯರು ಬ್ಯಾಂಕಿನಿಂದ ಸದರಿ ಸ್ಟೇಟ್ ಮೆಂಟನ್ನು ತರಿಸಲು ಅರ್ಜಿ ಸಲ್ಲಿಸಿದರೆ ನಮ್ಮದೇನು ತಕರಾರು ಇಲ್ಲ. ನಾವು ಸಾಕ್ಷಿದಾರರ ಸಮಕ್ಷಮ 4,81,750-00 ರೂಪಾಯಿಗಳಿಗೆ

ಕರಾರುಪತ್ರವನ್ನು ಮಾಡಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯದ ಬಾಬ್ತು ಮುಂಗಡ 2 ಲಕ್ಷ ಹಣವನ್ನು ನೀಡಿದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಯರು ಓದಿ ತಿಳಿದುಕೊಂಡು ಕರಾರುಪತ್ರಕ್ಕೆ ಸಹಿ ಹಾಕಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಯರಿಗೆ ಪತ್ರದ ಅಂಶಗಳು ತಿಳಿದಿಲ್ಲ ಎಂದರೆ ಸಾಕ್ಷಿಯು ಓದಿ ಹೇಳಿದ ನಂತರ ಸಹಿ ಮಾಡಿದ್ದಾರೆ ಎನ್ನುತ್ತಾರೆ. 1 ರಿಂದ 4 ನೇ ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ದಾಖಲೆಗಳನ್ನು ತೆಗೆಸಲು ಕೊಟ್ಟ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದಾಖಲೆ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಯರಿಗೆ ಕನ್ನಡ ಮತ್ತು ಉರ್ದು ಓದಲು ಬರುವುದಿಲ್ಲ ಎಂದರೆ ಸಾಕ್ಷಿಯು ಕನ್ನಡ ಬರುವುದಿಲ್ಲ ಅದರೆ ಉರ್ದು ಬರುತ್ತದೆ ಎನ್ನುತ್ತಾರೆ. 1 ರಿಂದ 4 ನೇ ಪ್ರತಿವಾದಿಯರು ಅನಕ್ಷರಸ್ಥರಾಗಿರುವುದರಿಂದ ಅವರ ಒಳ್ಳೆತನವನ್ನು ದುರುಪಯೋಗಪಡಿಸಿಕೊಂಡು ನಾನು ನಾಗರಾಜ್ ಮತ್ತು ಪ್ರಾಸಾ 3 ರವರು ಕರಾರು ಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ಅಧಿಕಾರಪತ್ರವನ್ನು ಸಹ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ತೆ. ನ್ಯಾ. ಬೆ. ಮಾಡಲಾಗಿದೆ. ಓ. ಹೇ. ಕೆ. ಸರಿಯಿದೆ.

ಪ್ರ. ಸಿವಿಲ್ ನ್ಯಾಯಾಧೀಶರು
ಶಿಕಾರಿಪುರ.